ಪರೀಕ್ಷಾ ಸಾಮಗ್ರಿ ಖರೀದಿ

35 : (207)

ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್)

(ಅ) ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಪೂರೈಕೆಗೆ ಸಂಬಂಧಪಟ್ಟಂತೆ ಬೆಂಗಳೂರು ವಿಶ್ವವಿದ್ಯಾಲಯ ಇ-ಟೆಂಡರ್ ಕರೆಯದೆ ಸಾಮಾನ್ಯ ಟೆಂಡರ್ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

(ಆ) ಹಾಗಿದ್ದಲ್ಲಿ ಇದು ಕಾನೂನು ಉಲ್ಲಂಘನೆ ಯಾಗುವುದಿಲ್ಲವೇ?

(ಇ) ಈ ರೀತಿ ಕಾನೂನು ಉಲ್ಲಂಘಿಸಲು ಕಾರಣಗಳೇನು?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

(ಅ) ಬೆಂಗಳೂರು ವಿಶ್ವವಿದ್ಯಾಲಯವು ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಪೂರೈಕೆಗೆ ಸಂಬಂಧಪಟ್ಟಂತೆ ಮೊದಲು ಇ-ಸಂಗ್ರಹಣೆ ಪ್ರಕ್ರಿಯೆ ಮುಖಾಂತರವೇ ಸಂಗ್ರಹಣಾ ಕಾರ್ಯವನ್ನು ಕೈಗೊಂಡಿದ್ದು ನಂತರ ಸಂಗ್ರಹಣಾ ಕಾರ್ಯದಲ್ಲಿ ಬಿಡ್ಡುದಾರರು ಪೂರ್ಣ ಪ್ರಮಾಣದಲ್ಲಿ ಭಾಗವಹಿಸದ ಕಾರಣ. ಸಾಮಾನ್ಯ ಟೆಂಡರ್ ಕರೆಯಲಾಗಿತ್ತು.

(ಆ) ಹೌದು.

(ಇ) ಬೆಂಗಳೂರು ವಿಶ್ವವಿದ್ಯಾಲಯವು ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಪೂರೈಕೆಗೆ ಸಂಬಂಧಪಟ್ಟಂತೆ ಇ-ಸಂಗ್ರಹಣೆ ಪೋರ್ಟಲ್‌ನಲ್ಲಿ ದಿನಾಂಕ 1-2-2012ರಂದು ಟೆಂಡರ್‌ಗಳನ್ನು ಆಹ್ವಾನಿಸಿತ್ತು. ಟೆಂಡರ್‌ಗಳನ್ನು ಸ್ವೀಕರಿಸಲು ದಿನಾಂಕ 11-2-2012 ರಂದು ಅಂತಿಮ ದಿನಾಂಕವಾಗಿತ್ತು. ಈ ಟೆಂಡರ್ ಪ್ರಕ್ರಿಯೆಯಲ್ಲಿ ಉತ್ತರ ಪತ್ರಿಕೆಗಳನ್ನು, ಸ್ಕ್ಯಾನ್ ಮಾಡುವುದು. ಡಿಜಿಟೈಜೇಷನ್ ಮಾಡುವುದು ಮುಂತಾದ ಪ್ರಕ್ರಿಯೆ ಒಳಗೊಂಡಿದೆ. ಈ ಪ್ರಕ್ರಿಯೆ ಕೈಗೊಳ್ಳಲು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೂಕ್ತ ಸಾಧನೆ ಸಲಕರಣೆಗಳು ಇರುವುದಿಲ್ಲವೆಂದು ಬಹಳಷ್ಟು ಜನ ಬಿಡ್ಡುದಾರರು ಇ-ಟೆಂಡರ್‌ಗೆ ಪ್ರತಿಕ್ರಿಯಿಸಿರುವುದಿಲ್ಲ.

ದಿನಾಂಕ 9-4-2012 ರಿಂದ ಪರೀಕ್ಷೆಗಳು ಪ್ರಾರಂಭವಾಗು-ವುದೆಂದು ನಿಗದಿಗೊಂಡಿದ್ದರಿಂದ, ಈ ಅಲ್ಪಾವಧಿಯಲ್ಲಿ ಇ-ಸಂಗ್ರಹಣೆ ಮೂಲಕ ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಪೂರೈಕೆಗೆ ಸಂಬಂಧಪಟ್ಟ ಕಾರ್ಯಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಗಳನ್ನು ಕೊಟ್ಟು ದಿನಾಂಕ 21-2-2012 ರಂದು ಅಲ್ಪಾವಧಿಯ ಸಾಮಾನ್ಯ ಟೆಂಡರ್‌ಗಳನ್ನು ಕರೆಯಲಾಗಿತ್ತು.

ಈ ಬಗ್ಗೆ ಸ್ವೀಕರಿಸಿದ ಕೆಲವು ದೂರುಗಳ ಹಾಗೂ ಪತ್ರಿಕಾ ವರದಿಗಳ ಆಧಾರದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದ ಸ್ಪಷ್ಟೀಕರಣ ಕೋರಲಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯವು ನೀಡಿದ ವರದಿಯಲ್ಲಿ ಸಮಯದ ಅಭಾವದಿಂದ ಮತ್ತು ಬಿಡ್ದುದಾರರು ಉತ್ತರ ಪತ್ರಿಕೆಗಳ ಮುದ್ರಣ, ಸ್ಕ್ಯಾನಿಂಗ್ ಮುಂತಾದ ಪ್ರಕ್ರಿಯೆಗಳನ್ನು ಇನ್ನಷ್ಟು ಪಾರದರ್ಶಕತೆಯಿಂದ ಮಾಡಬೇಕೆಂದು ಸಾಮಾನ್ಯ ಟೆಂಡರ್ ಕರೆಯಲಾಗಿತ್ತು ಎಂದು ತಿಳಿಸಿದ ವರದಿಯನ್ನು ಪರಿಶೀಲಿಸಿ ಎಲ್ಲಾ ಸಂಗ್ರಹಣೆ ಕಾರ್ಯಗಳನ್ನು ಇ-ಸಂಗ್ರಹಣೆ ಮೂಲಕವೇ ಮಾಡಬೇಕೆಂದು ಕಾನೂನು ಜಾರಿಯಲ್ಲಿರುವುದರಿಂದ, ಇ-ಸಂಗ್ರಹಣೆ ಮೂಲಕವೇ ಖರೀದಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಲು ತಿಳಿಸುತ್ತಾ. ಮ್ಯಾನುಯಲ್ ಟೆಂಡರನ್ನು ರದ್ದುಪಡಿಸಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ದಿನಾಂಕ 12-3-2012 ರಂದು ಸೂಚಿಸಲಾಗಿದೆ. ಅದರಂತೆ ಬೆಂಗಳೂರು ವಿಶ್ವವಿದ್ಯಾಲಯದವರು ಇ-ಸಂಗ್ರಹಣೆ ಮೂಲಕವೇ ಖರೀದಿ ಮಾಡಲು ಅಗತ್ಯ ಕ್ರಮ ಕೈಗೊಂಡಿದೆ.

ಶ್ರೀ ನೆ.ಲ. ನರೇಂದ್ರಬಾಬು (ಶ್ರೀ ರಾಮಲಿಂಗಾ ರೆಡ್ಡಿಯವರ ಪರವಾಗಿ) :- ಉತ್ತರದಲ್ಲಿ ಬಿಡ್ದುದಾರರು ಪೂರ್ಣ ಪ್ರಮಾಣದಲ್ಲಿ ಭಾಗವಹಿಸದ ಕಾರಣ ಸಾಮಾನ್ಯ ಟೆಂಡರ್ ಕರೆಯಲಾಗಿತ್ತು ಎಂದು ಹೇಳುತ್ತಾರೆ. Transparency Act ಪ್ರಕಾರ, ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತದ ಯಾವುದೇ ಒಂದು ಕಾಮಗಾರಿ ಅಥವಾ ಖರೀದಿ ಇದ್ದರೆ ಇ-ಟೆಂಡರ್ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಅನ್ನು ಕರೆಯಬೇಕಾಗಿತ್ತು. ಆದರೆ ಇಲ್ಲಿ violation ಆಗಿದೆ, Transparency Act follow ಮಾಡಿಲ್ಲ. ಅವ್ಯವಹಾರವಾಗಿದೆ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುತ್ತಿದೆ. ಆದ್ದರಿಂದ ಇವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೇ? (ಇ) ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಇ-ಸಂಗ್ರಹಣೆ ಮೂಲಕವೇ ಖರೀದಿಸಲು ಅಗತ್ಯ ಕ್ರಮ ಕೈಗೊಂಡಿದೆ ಎಂದು ಹೇಳುತ್ತಾರೆ. ಈ ರೀತಿ ಸಾಮಾನ್ಯ ಟೆಂಡರ್ ಕರೆಯುವುದರಿಂದ ಬೇರೆಯವರು ಬಿಡ್ ಮಾಡಲು ಅವಕಾಶ ಸಿಗುವುದಿಲ್ಲ. ಇದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪುವುತ್ತಾರೆಯೇ? ಪೂರ್ಣ ಪ್ರಮಾಣದಲ್ಲಿ ಬಿಡ್ದುದಾರರು ಭಾಗವಹಿಸಿರಲಿಲ್ಲ ಎಂದರೆ ಎಷ್ಟು ಜನ ಭಾಗವಹಿಸಿದ್ದರು? ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು. ಇಲ್ಲಿ ಅವ್ಯವಹಾರವಾಗಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :- ಸನ್ಮಾನ್ಯ ನರೇಂದ್ರ ಬಾಬುರವರು ಹೇಳಿರುವುದು ಸರಿಯಾಗಿದೆ. ಎಲ್ಲವನ್ನೂ ಕೂಡ ಇ-ಟೆಂಡರಿಂಗ್ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಮೂಲಕವೇ ಮಾಡಬೇಕು ಎನ್ನುವುದು ಇದೆ. ಪ್ರಾರಂಭಿಕ

ಹಂತದಲ್ಲಿ ಯಾರೂ ಅದಕ್ಕೆ ಸರಿಯಾಗಿ ಸ್ಪಂದಿಸಲಿಲ್ಲ ಎನ್ನುವ ಕಾರಣಕ್ಕಾಗಿ ಸಾಮಾನ್ಯ ಟೆಂಡರ್‌ನಲ್ಲಿ ಅದನ್ನು ಕೈಗೆತ್ತಿಕೊಂಡಿದ್ದರು. ಇದು ಗೊತ್ತಾದ ತಕ್ಷಣ ಇದನ್ನು ರದ್ದು ಮಾಡಬೇಕು ಮತ್ತು ಇ–ಟೆಂಡರಿಂಗ್ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಮೂಲಕವೇ ಮಾಡಬೇಕು ಎಂದು ಹೇಳುವಂಥ ಕೆಲಸವನ್ನು ಮಾಡಿದ್ದೇವೆ. ಮ್ಯಾನುಯಲ್ ಟೆಂಡರನ್ನು ರದ್ದುಪಡಿಸಲು ದಿನಾಂಕ : 12–3–2012 ರಂದು ಸೂಚಿಸಲಾಗಿದೆ. ಅದರಂತೆ ಬೆಂಗಳೂರು ವಿಶ್ವವಿದ್ಯಾಲಯ ಇದನ್ನು ಇ–ಸಂಗ್ರಹಣೆ ಮೂಲಕವೇ ಖರೀದಿ ಮಾಡಬೇಕೆನ್ನುವ ಆದೇಶವನ್ನು ಹೊರಡಿಸಿದೆ. ಈ ಮಧ್ಯದಲ್ಲಿ ಯಾರ್‍ಯಾರು, ಏನೇನು ತೊಂದರೆಗಳನ್ನು ಮಾಡಿದ್ದಾರೆ ಅದನ್ನು ತನಿಖೆ ಮಾಡುವಂಥ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

ಪ್ರಶ್ನೆ ಸಂಖ್ಯೆ 36 (188)
ಶ್ರೀ ಹೆಚ್.ಸಿ. ಬಾಲಕೃಷ್ಣ
(ಮಾನ್ಯ ಸದಸ್ಯರು ಹಾಜರಿರಲಿಲ್ಲ)